ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಆರ್. ದೇವದಾಸ್

ಡಾ. ಜೋಸೆಫ್ ರವೀಂದ್ರನಾಥ್ ಪಯಾಸ್ -ವಿರುದ್ಧ ಡೆರೆಕ್ ಅಲೋಷಿಯಸ್ ಸುನಿಲ್ ಕುಮಾರ್ ಪಯಾಸ್ ಪ್ರಭು ಮತ್ತು ಇತರರು

ರಿಟ್ ಅರ್ಜಿಸಂಖ್ಯೆ: 35552/2013 (ಜಿಎಂ-ಸಿಪಿಸಿ), ದಿನಾಂಕ 17 ನೇ ಏಪ್ರಿಲ್, 2018

ಆಜ್ಞೆ

ನ್ಯಾಯಮೂರ್ತಿ ಶ್ರೀ ಆರ್. ದೇವದಾಸ್:

ಮೂಲ ದಾವೆಯಲ್ಲಿನ ಪ್ರತಿವಾದಿ ಸಂ .1 ಇವರು, ಸಿವಿಲ್ ಪ್ರಕ್ರಿಯಾ ಸಂಹಿತೆಯ 151 ನೇ ಪ್ರಕರಣದೊಂದಿಗೆ ಓದಲಾದ ಕ್ರಮಾದೇಶ VI, ನಿಯಮ 17 ರಡಿಯಲ್ಲಿ ವಾದಿಯು ಸಲ್ಲಿಸಿದ ಐ.ಎ.ಸಂ .13 ರ ಮೇಲೆ || ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶ, ಮಂಗಳೂರು, ದಕ್ಷಿಣ ಕನ್ನಡ ಇವರು ಹೊರಡಿಸಿದ ದಿನಾಂಕ 15.07.2013 ರ ಪ್ರಶ್ನಿತ ಆದೇಶದ ಮೂಲಕ ಬಾಧಿತರಾಗಿದ್ದು, ಈ ರಿಟ್ ಅರ್ಜಿಯನ್ನು ಸಲ್ಲಿಸಿರುತ್ತಾರೆ.

2. ಮೂಲ ದಾವೆಯಲ್ಲಿ ವಾದಿಯಾಗಿರುವಂಥ ಇಲ್ಲಿನ ಪ್ರತ್ಯರ್ಜಿದಾರ ಸಂ .1 ಇವರು ವಿಭಜನೆಯ ಪರಿಹಾರಕ್ಕೆ ಸಂಬಂಧಿಸಿದಂತೆ, ದಾವಾ ಅನುಸೂಚಿನ ಸ್ವತ್ತಿನ ಪರಭಾರೆಯಿಂದ ಪ್ರತಿವಾದಿಗಳನ್ನು ನಿರ್ಬಂಧಿಸುವ ಶಾಶ್ವತ ನಿರ್ಬಂಧಕಾಜ್ಞೆಗೆ ಸಂಬಂಧಿಸಿದಂತೆ ಹಾಗೂ ದಾವಾ ಅನುಸೂಚಿನ ಸ್ವತ್ತಿನಿಂದ ಬರುವ ಎಲ್ಲಾ ಆದಾಯ ಹಾಗೂ ಲಾಭಾಂಶಗಳ ಸರಿಯಾದ ಹಾಗೂ ನಿಖರವಾದ ಲೆಕ್ಕಪತ್ರಗಳನ್ನು ಸಲ್ಲಿಸಲು ಹಾಗೂ ದಾವೆಯ ವೆಚ್ಚವನ್ನು ಭರಿಸಲು ಪ್ರತಿವಾದಿಗಳಿಗೆ ನಿರ್ದೇಶಿಸಲು ದಾವೆಯನ್ನು ಸಲ್ಲಿಸಿರುತ್ತಾರೆ.

3. ವಾದಿಯ ಕ್ಲೇಮು ಆತನ ತಂದೆ ತಾಯಿಯರು ಬಿಟ್ಟುಹೋದ ಉಯಿಲನ್ನು ಆಧರಿಸಿರುವುದರಿ ಂ ದ ಹಾಗೂ ಉಯಿಲುಗಳನ್ನು ಯುಕ್ತವಾಗಿ ಪ್ರಮಾಣೀಕರಿಸಿರುವುದರಿಂದ, ಹಾಗೂದಿನಾಂಕ: 01.01.2003 ರ ವಿಮೋಚನಾ ಪತ್ರವನ್ನು ಕಾರ್ಯಗತಗೊಳಿಸುವ ಮೂಲಕ ಮೃತ ತಂದೆತಾಯಿಯರ ಸಂಪದದ ನಿರ್ವಹಣೆಯು ಕೊನೆಗೊಳ್ಳುವುದರಿಂದ ವಿಭಜನೆಗೆ ಸಂಬಂಧಿಸಿದ ದಾವೆಯು ಊರ್ಜಿತವಾಗುವುದಿಲ್ಲವೆಂದೂ ಮತ್ತು ಲಭ್ಯವಿರುವ ಒಂದೇ ಪರಿಹಾರವೆಂದರೆ ನಿರ್ವಹಣೆಗೆ ಸಂಬಂಧಿಸಿದಂತೆ ದಾವೆ ಹೂಡುವುದೆಂದು ವಾದಿಸಿ ಇತರ ವಿಷಯಗಳೊಂದಿಗೆದಿನಾಂಕ: 25.10.2003 ರಂದು ಮೊದಲ ಪ್ರತಿವಾದಿಯು ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾನೆ.ಮುಂದುವರೆದು, ವಿಮೋಚನಾ ಪತ್ರದ ಬಲದಿಂದ, ಪ್ರಶ್ನಿತ ಸ್ವತ್ತನ್ನು ಸಂ .4 ರಿಂದ 9 ರವರೆಗಿನ ಪ್ರತಿವಾದಿಗಳ ಹೆಸರಿನಲ್ಲಿ ಮಾರಾಟ ಮಾಡಲಾಯಿತೆಂದು ಲಿಖಿತ ಹೇಳಿಕೆಯಲ್ಲಿ ಆರೋಪ ಮಾಡಲಾಗಿದೆ.ವಿಮೋಚನಾ ಪತ್ರ ಮತ್ತು ವಾಸ್ತವವಾಗಿ ವಾದಪತ್ರದಲ್ಲಿ ಸಂ .4 ರಿಂದ 9 ರ ವರೆಗಿನ ಪ್ರತಿವಾದಿಗಳ ಪರವಾಗಿ ಮೊದಲ ಪ್ರತಿವಾದಿಯು ಬರೆಯಿಸಿದ ಕ್ರಯಪತ್ರಗಳ ಬಗ್ಗೆ ಸ್ವತಃ ವಾದಿಯು ತಿಳಿಸಿರುತ್ತಾನೆ.

4. ವಾದಿಯು, ಲಿಖಿತ ಹೇಳಿಕೆಯನ್ನು ಸಲ್ಲಿಸಿದ ಹತ್ತು ವರ್ಷಗಳ ತರುವಾಯ ದಿನಾಂಕ 19.06.2013 ರಂದು ಸಿವಿಲ್ ಪ್ರಕ್ರಿಯಾ ಸಂಹಿತೆಯ 151 ನೇ ಪ್ರಕರಣದೊಂದಿಗೆ ಓದಲಾದ ಕ್ರಮಾದೇಶ VI, ನಿಯಮ 17 ರಡಿಯಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾನೆ.ವಾದಪತ್ರಕ್ಕೆ ಸುಮಾರು ಐದು ಪುಟಗಳನ್ನು ಸೇರಿಸಲು ಕೋರಿರುವಾಗ, ವಾದಿಯು ಸಹ,ದಿನಾಂಕ: 01.01.2003 ರ ವಿಮೋಚನಾ ಪತ್ರವು ಶೂನ್ಯ ಮತ್ತು ರಿಕ್ತವಾಗಿದ್ದು, ವಾದಿಯ ಮೇಲೆ

ಬಂಧನಕಾರಿಯಾಗಿರುವುದಿಲ್ಲವೆಂದು ಘೋಷಿಸುವಂತೆ ಕೋರಿ ಹೊಸ ಪರಿಹಾರವನ್ನು ಸೇರಿಸಲು ಕೋರಿರುತ್ತಾನೆ.ಪರಿಹಾರ ಕೋರುವಲ್ಲಿ ಆದ ವಿಳಂಬಕ್ಕೆ ಸಂಬಂಧಿಸಿದಂತೆ ನೀಡಲಾದ ಕಾರಣವೆಂದರೆ, ವಾದಿಯು ತನ್ನ ವಕೀಲನಿಗೆ ಎಲ್ಲಾ ಸೂಚನೆಗಳನ್ನು ನೀಡಿದ್ದು, ಸದರಿ ವಕೀಲನಿಗೆ ಚೆನ್ನಾಗಿ ತಿಳಿದಿದ್ದ ಕಾರಣಗಳಿಗಾಗಿ ವಾದಪತ್ರದಲ್ಲಿ ಈ ವಾಸ್ತವಾಂಶಗಳನ್ನು ಸೇರಿಸಲಾಗಿಲ್ಲ ಎಂಬುದಾಗಿದೆ.

5. ಅಧಿವಿಚಾರಣಾ ನ್ಯಾಯಾಲಯವು, " ವಾದಿಯು ಕೋರಿದ ತಿದ್ದುಪಡಿಯನ್ನು ಗಮನಿಸಿದಾಗ, ಅದು ದಾವೆಯ ಸ್ವರೂಪವನ್ನು ಬದಲಾಯಿಸುವುದಿಲ್ಲ ಅಥವಾ ದಾವೆಯ ವ್ಯಾಜ್ಯ ಕಾರಣವನ್ನು ಬದಲಾಯಿಸುವುದಿಲ್ಲ.ಪ್ರತಿವಾದಿಗಳಿಗೆ ಯಾವುದೇ ಬಾಧಕ ಅಥವಾ ಸಂಕಷ್ಟ ಉಂಟಾದರೆ ವಾದಿಯ ಮೇಲೆ ವೆಚ್ಚವನ್ನು ವಿಧಿಸುವ ರೂಪದಲ್ಲಿ ಅವರಿಗೆ ಪರಿಹಾರವನ್ನು ನೀಡಬಹುದಾಗಿರುತ್ತದೆ " ಎಂದು ಹೇಳಿ ಗೊಂದಲದ ಆದೇಶವನ್ನು ಹೊರಡಿಸಿದೆ.ಹಾಗೆ ಹೇಳಿ, ಮಾನ್ಯ ಅಧಿವಿಚಾರಣಾ ನ್ಯಾಯಾಧೀಶರು 2,000/- ರೂ.ಗಳ ವೆಚ್ಚವನ್ನು ವಿಧಿಸಿ, ಅರ್ಜಿಯನ್ನು ಪುರಸ್ಕರಿಸಿರುತ್ತಾರೆ.

6. ಅರ್ಜಿದಾರರ (ಪ್ರತಿವಾದಿ ಸಂ .1) ಪರ ಹಾಜರಾದ ಮಾನ್ಯ ನ್ಯಾಯಾವಾದಿ ಶ್ರೀ ಚೈತನ್ಯ ಹೆಗಡೆ ಹಾಗೂ ಪ್ರತ್ಯರ್ಜಿದಾರ ಸಂ .1 (ವಾದಿ) ಪರ ಹಾಜರಾದ ಮಾನ್ಯ ನ್ಯಾಯವಾದಿಗಳಾದ ಶ್ರೀ ಸಿರಿಲ್ ಪ್ರಸಾದ್ ಪಯಾಸ್ರವರುಗಳ ವಾದವನ್ನು ಆಲಿಸಿರುತ್ತೇನೆ.

7. ಅರ್ಜಿದಾರರ (ಪತಿವಾದಿ ಸಂ .1) ಪರ ಮಾನ್ಯ ನ್ಯಾಯವಾದಿಗಳ ತಿದ್ದುಪಡಿ ಅರ್ಜಿಯನ್ನು, ಲಿಖಿತ ಹೇಳಿಕೆಯನ್ನು ದಾಖಲಿಸಿದ ತರುವಾಯ ಹತ್ತು ವರ್ಷಗಳಿಗಿಂತ ಹೆಚ್ಚಿನ ಕಾಲದ ವಿಳಂಬಿತ ಹಂತದಲ್ಲಿ ಅಂಗೀಕರಿಸುವಂತಿಲ್ಲವೆಂದು ವಾದಿಸಿರುತ್ತಾರೆ.ಅಲ್ಲದೆ, ಮಾನ್ಯ ವಿಚಾರಣಾಧೀನ ನ್ಯಾಯಾಧೀಶರು, ಯುಕ್ತ ಪರಿಶ್ರಮದ ಹೊರತಾಗಿಯೂ, ವಾದಿಯನ್ನು, ಪ್ರಸ್ತಾಪಿಸಿದ ತಿದ್ದುಪಡಿ ಅರ್ಜಿಯಲ್ಲಿ ವಾಸ್ತವಾಂಶಗಳು ಹಾಗೂ ವಿವಾದಾಂಶಗಳನ್ನು ಪ್ರಸ್ತಾಪಿಸುವುದರಿಂದ ನಿರ್ಬಂಧಿಸಲಾಗಿತ್ತೇ ಎಂಬುದನ್ನು ಪರಿಗಣಿಸಲು ಕರ್ತವ್ಯ ಬದ್ಧರಾಗಿದ್ದರೆಂದೂ ವಾದಿಸಿರುತ್ತಾರೆ.ಮುಂದುವರೆದು, ಇವರು ವಿಮೋಚನಾ ಪತ್ರವನ್ನು ಶೂನ್ಯ ಹಾಗೂ ರಿಕ್ತವೆಂದು ಘೋಷಿಸುವಂತೆ ಕೋರಿದ ಹೊಸ ಪರಿಹಾರವು ಕಾಲಪರಿಮಿತಿಯಿ ಂ ದ ನಿರ್ಬಂಧಿತವಾಗಿದೆಯೆಂದೂ, ಆದ್ದರಿಂದ ಇದನ್ನು ಅಂಗೀಕರಿಸುವಂತಿಲ್ಲವೆಂದೂ ವಾದಿಸಿರುತ್ತಾರೆ.ಇವರ ವಾದಗಳಿಗೆ ಪೂರಕವಾಗಿ, ಮಾನ್ಯ ನ್ಯಾಯವಾದಿಯು ಈ ಮುಂದಿನ ತೀರ್ಪುಗಳನ್ನು ಉದಾಹರಿಸಿರುತ್ತಾರೆ:

1. ರಾಧಿಕ ದೇವಿ -ವಿರುದ್ಧ ಭಜರಂಗಿ ಸಿಂಗ್ ಹಾಗೂ ಇತರರು ಎಐಆರ್ 1996 ಎಸ್ಸಿ 23582. 2007 ಎಐಆರ್ ಎಸ್ಡಬ್ಲ್ಯೂ

2. ಅಜೇಂದ್ರ ಪ್ರಸಾದ್ಜಿ ಎನ್. ಪಾಂಡೆ ಹಾಗೂ ಮತ್ತೊಬ್ಬರು ವಿರುದ್ಧ ಸ್ವಾಮಿ ಕೇಶವಪ್ರಕಾಶ್ ದಾಸ್ ಜಿ.ಎನ್ ಹಾಗೂ ಇತರರು [2].

8. ರಾಧಿಕ ದೇವಿ ಮೊಕದ್ದಮೆಯಲ್ಲಿ (ಮೇಲೆ ಹೇಳದ) ಮಾನ್ಯ ನ್ಯಾಯಾಧೀಶರು, ಲಕ್ಷ್ಮೀದಾಸ್ ಧಯಾಬಾಯಿ ಕಬರ್ವಾಲ -ವಿರುದ್ಧ ನಾನಾಬಾಯಿ ಚುನ್ನಿಲಾಲ್ ಕಬರ್ವಾಲ ಮೊಕದ್ದಮೆಯಲ್ಲಿನ ಈ ಮುಂಚಿನ ತೀರ್ಪನ್ನು ಉದಾಹರಿಸಿ ಪಕ್ಷಕಾರನು ಕಾಲಪರಿಮಿತಿಯ ನಿರ್ಬಂಧದಿಂದ ಹಕ್ಕನ್ನು ಪಡೆದಿರುವಲ್ಲಿ ಹಾಗೂ ಇದನ್ನು ವಾದಪತ್ರದ ತಿದ್ದುಪಡಿಯ ಮೂಲಕ ಹಿಂತೆಗೆದುಕೊಳ್ಳಬೇಕೆಂದು ಕೋರಿದ್ದಲ್ಲಿ, ಅಂಥ ಸಂದರ್ಭಗಳಲ್ಲಿ (ತಿದ್ದುಪಡಿಯನ್ನು) ನಿರಾಕರಿಸಲಾಗುವುದೆಂದು ಅಭಿಪ್ರಾಯಪಟ್ಟಿರುತ್ತಾರೆ.ಮೂರು ವರ್ಷಗಳ ಕಾಲ ಲಿಖಿತ

ಹೇಳಿಕೆಯನ್ನು ಸಲ್ಲಿಸಿದ ತರುವಾಯವೂ ಕೂಡ ವಾದಪತ್ರದ ತಿದ್ದುಪಡಿಗೆ ಸಂಬಂಧಿಸಿದಂತೆ ಅರ್ಜಿ ಸಲ್ಲಿಸಲು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ.ಆ ಮೂಲಕ, ಪ್ರತ್ಯರ್ಜಿದಾರರ ಪರವಾಗಿ ಪ್ರಾಪ್ತವಾದ ಹಕ್ಕನ್ನು, ವಾದಪತ್ರದ ತಿದ್ದುಪಡಿಗೆ ಅನುಮತಿಸುವ ಮೂಲಕ ವಿಫಲಗೊಳಿಸಲಾಗಿದೆ.

9. ಅಜೇಂದ್ರ ಪ್ರಸಾದ್ಜಿ ಎನ್. ಪಾಂಡೆ ಹಾಗೂ ಮತ್ತೊಬ್ಬರು (ಮೇಲೆ ಹೇಳಿದ) ಮೊಕದ್ದಮೆಯಲ್ಲಿ, ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಅಧಿವಿಚಾರಣಾ ಚ ನ್ಯಾಯಾಲಯವು ನೀಡಿದ ತಾರ್ಕಿಕ ವಾದವು ಪ್ರಸ್ತುತ ತಿದ್ದುಪಡಿ ಮಾಡುವ ಮೂಲಕ ಪರಿಚಯಿಸಬೇಕೆಂದು ಕೋರಿದ ವಿಷಯವನ್ನು ಯುಕ್ತ ಪರಿಶ್ರಮದ ಹೊರತಾಗಿಯೂ ಈ ಮೊದಲೇ ಪ್ರಸ್ತಾಪಿಸಲಾಗಲಿಲ್ಲವೆಂಬ ಕಾನೂನಿನ ಅಗತ್ಯತೆಯನ್ನು ಪೂರೈಸುವಂಥ ವಿವರಗಳನ್ನು ನೀಡದೆ ದಂಡ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ VI, ನಿಯಮ 17 ರ ಅಗತ್ಯತೆಯನ್ನು ಪೂರೈಸುವುದಿಲ್ಲವೆಂದು ಅಭಿಪ್ರಾಯಪಟ್ಟಿರುತ್ತದೆ.ಅಲ್ಲದೆ ಘನತೆವೆತ್ತ ನ್ಯಾಯಾಧೀಶರು, ವಿವಾದಾಂಶಗಳು ಇತ್ಯರ್ಥಗೊಂಡಾಗ ಹಾಗೂ ಪ್ರಕರಣವನ್ನು ಸಾಕ್ಷ್ಯದ ದಾಖಲೆಗೆ ಸಂಬಂಧಿಸಿದಂತೆ ಪರಿಗಣಿಸಿದಾಗ ಅಧಿವಿಚಾರಣೆಯನ್ನು ಪ್ರಾರಂಭಿಸಲಾಗಿದೆಯೆಂಬುದಾಗಿ ಭಾವಿಸತಕ್ಕದ್ದೆಂದು ಅಭಿಪ್ರಾಯಪಟ್ಟಿರುತ್ತಾರೆ.

10. ಮಾನ್ಯ ನ್ಯಾಯವಾದಿಗಳು, ಪ್ರಸ್ತುತ ಮೊಕದ್ದಮೆಯಲ್ಲಿ ಅಧಿವಿಚಾರಣಾ ನ್ಯಾಯಾಲಯವು,ದಿನಾಂಕ: 16.07.2009 ರಂದು ವಿವಾದಾಂಶಗಳನ್ನು ರೂಪಿಸಿತ್ತು ಎಂದೂ ಮತ್ತು ಹೆಚ್ಚುವರಿ ವಿವಾದಾಂಶಗಳನ್ನುದಿನಾಂಕ: 10.06.2011 ರಂದು ರೂಪಿಸಿತ್ತೆಂದು ಎತ್ತಿ ತೋರಿಸಿರುತ್ತಾರೆ.ಆದ್ದರಿಂದ, ದಾವೆಯಲ್ಲಿನ ಅಧಿವಿಚಾರಣೆಯನ್ನು 2011 ನೇ ವರ್ಷದಲ್ಲಿಯೇ ಪ್ರಾರಂಭಿಸಲಾಗಿತ್ತೆಂದು ವಾದಿಸಲಾಗಿದೆ.ಮುಂದುವರೆದು, ಇವರು, ಪ್ರಾಸ್ತಾವಿಕ ವಿವಾದಾಂಶಗಳನ್ನು ಎತ್ತಲಾಗಿರುವುದರಿಂದ, ಅಧಿವಿಚಾರಣಾ ನ್ಯಾಯಾಲಯವು ವಿವಾದಾಂಶ ಸಂ .6 ರೊಂದಿಗೆ ವ್ಯವಹರಿಸಲು ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 14, ನಿಯಮ 2 ರೊಂದಿಗೆ ಓದಲಾದ ಕ್ರಮಾದೇಶ VII, ನಿಯಮ 11 ರಡಿಯಲ್ಲಿ ಸಲ್ಲಿಸಿದ ಅರ್ಜಿಯನ್ನು ಪ್ರಾಸ್ತಾವಿಕ ವಿವಾದಾಂಶವೆಂದು ಅಂಗೀಕರಿಸಿರುತ್ತದೆಂಬುದನ್ನೂ ಎತ್ತಿ ತೋರಿಸಿರುತ್ತಾರೆ.ಮಾನ್ಯ ನ್ಯಾಯವಾದಿಗಳು, ಕಾಲಪರಿಮಿತಿ ಕಾನೂನಿನ ಮೂಲಕ ಪ್ರತಿವಾದಿಗೆ ಪ್ರಾಪ್ತವಾಗುವ ಹಕ್ಕುಗಳನ್ನು ಹಿಂಪಡೆಯಲು ತಿದ್ದುಪಡಿ ಅರ್ಜಿಯನ್ನು ಮರುಪರಿಶೀಲನೆಗಾಗಿ ಸಲ್ಲಿಸಲಾಗಿದೆಯೆಂದು ಬಲವಾಗಿ ವಾದಿಸಿ ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿರುವ ಪ್ರಶ್ನಿತ ಆದೇಶವನ್ನು ರದ್ದುಪಡಿಸಲು ಕೋರಿರುತ್ತಾರೆ.

11. ಮತ್ತೊಂದು ಕಡೆ 1 ನೇ ಪ್ರತ್ಯರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ಪ್ರಶ್ನಿತ ಆದೇಶವನ್ನು ಬೆಂಬಲಿಸುವಂತೆ ಕೋರಿರುತ್ತಾರೆ.ಅವರು ತಮ್ಮ ವಾದಗಳಿಗೆ ಪೂರಕವಾಗಿ ಈ ಮುಂದಿನ ತೀರ್ಪುಗಳನ್ನು ಉದಾಹರಿಸಿರುತ್ತಾರೆ.

1. ಈಶಾನ್ಯ ರೈಲ್ವೆ ಆಡಳಿತ ಗೋರಖ್ ಪುರ್ -ವಿರುದ್ಧ ಭಗವಾನ್ ದಾಸ್ ಮೃತರಾಗಿರುವುದರಿಂದ ಅವರ ಕಾನೂನುಸಮ್ಮತ ವಾರಸುದಾರರು, ಮೊಕದ್ದಮೆಯನ್ನು ಆಧರಿಸಿ, ಮೇಲ್ಮನವಿ ಸಲ್ಲಿಸುವ ಹಂತದಲ್ಲಿಯೂ ವಾದಗಳ ತಿದ್ದುಪಡಿಗೆ ಅನುಮತಿ ನೀಡಬಹುದಾಗಿದೆಯೆಂದು, ಪರಂತು, ತಿದ್ದುಪಡಿಯು ಮತ್ತೊಬ್ಬ ಪಕ್ಷಕಾರನಿಗೆ ಅನ್ಯಾಯವನ್ನು ಎಸಗದೆ, ವಿವಾದಿತ ಪ್ರಶ್ನೆಯ ನಿರ್ಧರಣೆಗೆ ಅವಶ್ಯಕವಾಗಿರುತ್ತದೆಂದು ವಾದಿಸಲಾಗಿರುತ್ತದೆ.

ii.ಬಲದೇವ್ ಸಿಂಗ್ ಹಾಗೂ ಇತರರು -ವಿರುದ್ಧ-ಮನೋಹರ್ ಸಿಂಗ್ ಮತ್ತು ಮತ್ತೊಬ್ಬರು ಮೊಕದ್ದಮೆಯಲ್ಲಿ, ಪಕ್ಷಕಾರನು ದಾಖಲೆಯಲ್ಲಿ ಈಗಾಗಲೇ ಪ್ರಸ್ತಾಪಿಸಿದಂಥ ವಾಸ್ತವಾಂಶಗಳ ಸಂಬಂಧದಲ್ಲಿ ಹೆಚ್ಚಿನ ವಿವರಗಳು ವಿಸ್ತಾರವಾಗಿರುವ ಮತ್ತು ಒದಗಿಸಿರುವ ಕಡೆಗಳಲ್ಲಿ ಮಾತ್ರ ವಾದಗಳ ತಿದ್ದುಪಡಿಗೆ ಅನುಮತಿ ನೀಡಬಹುದಾಗಿದೆ ಮತ್ತು ನ್ಯಾಯಾಲಯಕ್ಕೆ ನ್ಯಾಯಸಮ್ಮತ ಹಾಗೂ ಯುಕ್ತವೆಂದು ಕಂಡುಬರುವಂಥಹ ರೀತಿಯಲ್ಲಿ ಮತ್ತು ನಿಬಂಧನೆಗಳ ಮೇಲೆ ನ್ಯಾಯಾಲಯವು ವಾದಗಳ ತಿದ್ದುಪಡಿಗೆ ಅನುಮತಿ ನೀಡುವ ವ್ಯಾಪಕ ಅಧಿಕಾರ ಹಾಗೂ ಮುಕ್ತ ವಿವೇಚನೆಯನ್ನು ಹೊಂದಿರುತ್ತದೆಂದು ತೀರ್ಪು ನೀಡಲಾಗಿದೆ.

iii.ಸಜ್ಜನ್ ಕುಮಾರ್ -ವಿರುದ್ಧ ರಾಮ್ ಕಿಶನ್ 5 ' ಮೊಕದ್ದಮೆಯಲ್ಲಿ, ಪ್ರಸ್ತಾಪಿತ ತಿದ್ದುಪಡಿಯು ಮುಖ್ಯ ಪಕ್ಷಕಾರರ ನಡುವಿನ ವಿವಾದದಲ್ಲಿ ವಾಸ್ತವಿಕ ಪ್ರಶ್ನೆಯನ್ನು ಪ್ರಸ್ತಾಪಿಸಲು ಅವಶ್ಯಕವಾಗಿದ್ದಲ್ಲಿ, ಅಂಥ ತಿದ್ದುಪಡಿಗೆ ಅನುಮತಿಯನ್ನು ನಿರಾಕರಿಸಿದರೆ, ದಾವೆಯು ವಾದಿಯ ಪರವಾದ ಸಂದರ್ಭದಲ್ಲಿ ಅಮಲ್ಜಾರಿಯ ಹಂತದಲ್ಲಿ ಅನಾವಶ್ಯಕ ಗೊಂದಲ ಉದ್ಭವಿಸುವ ಸಂಭಾವ್ಯತೆಯಿರುತ್ತದೆ.ಹಾಗಾಗಿ, ದಾವೆಯ ಆರಂಭಿಕ ಹಂತದಲ್ಲಿ ವಾದಪತ್ರದಲ್ಲಿ ತಿದ್ದುಪಡಿಯನ್ನು ವಿಳಂಬವಿಲ್ಲದೆ ತ್ವರಿತವಾಗಿ ಕೋರಲು ವಾದಿಯು ಪರಿಶ್ರಮಶೀಲನಾಗಿದ್ದರೂ, ಪ್ರಶ್ನಿತ ದೋಷವನ್ನು ಲಿಖಿತ ಹೇಳಿಕೆಯಲ್ಲಿ ಪ್ರಸ್ತಾಪಿಸಿದ್ದಾಗ ಮೇಲಿನ ಕಾರಣಗಳಿಗಾಗಿ ತಿದ್ದುಪಡಿಯನ್ನು ಅಂಗೀಕರಿಸಬೇಕಾಗಿರುತ್ತದೆಂದು ಅಭಿಪ್ರಾಯಪಟ್ಟಿರುತ್ತದೆ.

iv.ಈಸ್ಟಾಲ್ಲಾ ರಬ್ಬರ್ -ವಿರುದ್ಧ-ದಾಸ್ ಎಸ್ಟೇಟ್ (ಪ್ರೈ) ಅ. ಮೊಕದ್ದಮೆಯಲ್ಲಿ, ಪ್ರಸ್ತಾಪಿತ ತಿದ್ದುಪಡಿಯ ಉದ್ದೇಶವು ಮೊಕದ್ದಮೆಗೆ ಪೂರಕವಾಗಿ ಪ್ರತಿವಾದವನ್ನು ವಿವರಿಸುವುದು ಹಾಗೂ ಹೆಚ್ಚು ವರಿ ಮನವಿಗಳನ್ನು ಮಾಡಿಕೊಳ್ಳುವುದಾಗಿದ್ದಲ್ಲಿ ಪ್ರತಿವಾದಿಯು ಮಾಡಿದ ವಾದಗಳ ತಿದ್ದುಪಡಿಗೆ ಅನುಮತಿ ನೀಡಬೇಕಾಗಿತ್ತು.ಇತರೆ ಪಕ್ಷಕಾರರಿಗೆ ಗಂಭೀರ ಸ್ವರೂಪದ ಬಾಧಕವುಂಟಾದ ಹೊರತು ಹಾಗೂ ಪುರಸ್ಕರಿಸಲಾಗುವ ತಿದ್ದುಪಡಿ ಅರ್ಜಿಯ ಪರಿಣಾಮದಿಂದಾಗಿ ಪ್ರಾಪ್ತವಾದ ಹಕ್ಕುಗಳನ್ನು ಕಸಿಯದ ಹೊರತು ಅರ್ಜಿಯ ನಿರಾಕರಣೆಗೆ ವಿಳಂಬವೊಂದೇ ಕಾರಣವಾಗುವುದಿಲ್ಲವೆಂದು ಅಭಿಪ್ರಾಯ ಪಡಲಾಗಿರುತ್ತದೆ.

v.ರಾಜೇಶ್ ಕುಮಾರ್ ಅಗರವಾಲ್ ಹಾಗೂ ಇತರರು ವಿರುದ್ಧ ಕೆ.ಕೆ. ಮೋದಿ ಹಾಗೂ ಇತರರು ಮೊಕದ್ದಮೆಯಲ್ಲಿ, ನ್ಯಾಯಾಲಯಗಳು, ತಮ್ಮ ಮುಂದೆ ಬರುವಂಥ ಪ್ರಕರಣಗಳ ಗುಣಾರ್ಹತೆಗಳನ್ನು ಅಧಿವಿಚಾರಣೆ ಮಾಡಬೇಕು ಹಾಗೂ ತತ್ಪರಿಣಾಮವಾಗಿ, ಪಕ್ಷಕಾರರ ನಡುವೆ ವಿವಾದದಲ್ಲಿರುವ ವಾಸ್ತವಿಕ ಪ್ರಶ್ನೆಯನ್ನು ನಿರ್ಧರಿಸುವುದಕ್ಕೆ ಅವಶ್ಯಕವಾಗಬಹುದಾದಂಥ ಎಲ್ಲಾ ತಿದ್ದುಪಡಿಗಳನ್ನು ಅಂಗೀಕರಿಸಬೇಕು.ಆದರೆ, ಅದರಿಂದ ಎದುರು ಪಕ್ಷಕಾರರಿಗೆ ಅನ್ಯಾಯ ಅಥವಾ ತೊಂದರೆ ಉಂಟಾಗಬಾರದೆಂಬುದು ಉಪಬಂಧದ ಉದ್ದೇಶವಾಗಿರುತ್ತದೆಂದು ಅಭಿಪ್ರಾಯಪಡಲಾಗಿದೆ.

vi.ಆಂಧ್ರ ಬ್ಯಾಂಕ್ -ವಿರುದ್ಧ ಎಬಿಎನ್ ಆ ಬ್ಯಾಂಕ್ ಎನ್.ವಿ. ಹಾಗೂ ಇತರರು 8* ಮೊಕದ್ದಮೆಯಲ್ಲಿ, ಲಿಖಿತ ಹೇಳಿಕೆಯನ್ನು ತಿದ್ದುಪಡಿ ಮಾಡಲು ಕೋರುವಲ್ಲಿನ ವಿಳಂಬವು ತಿದ್ದುಪಡಿಯನ್ನು ನಿರಾಕರಿಸಲು ಕಾರಣವಾಗುವುದಿಲ್ಲ.ಅಂಥ ತಿದ್ದುಪಡಿಯನ್ನು ದಾವೆಯಲ್ಲಿನ ಪಕ್ಷಕಾರರ ನಡುವೆ ವಾಸ್ತವಿಕ ವಿವಾದವನ್ನು ನಿರ್ಧರಿಸುವುದಕ್ಕೆ ಅವಶ್ಯಕವಾಗಿರುತ್ತದೆಯೇ ಎಂಬುದು ಪರಿಗಣಿಸಬೇಕಾಗಿರುವ ಪ್ರಶ್ನೆಯಾಗಿರುತ್ತದೆಂದು ಅಭಿಪ್ರಾಯಪಡಲಾಗಿದೆ.

vii.ಮಹಾರಾಷ್ಟ್ರ ರಾಜ್ಯ -ವಿರುದ್ಧ-ಪ್ರವೀಣ್ ಜೆತಲಾಲ್ ಕಮ್ಹಾರ್ ಮೃತನಾಗಿರುವುದರಿಂದ ಅವನ ಕಾನೂನುಸಮ್ಮತ ವಾರಸುದಾರರು ಮೊಕದ್ದಮೆಯಲ್ಲಿ ರಿಕ್ತ ದಸ್ತಾವೇಜಿನಡಿಯಲ್ಲಿ ಸ್ವಾಧೀನವನ್ನು ತೆಗೆದುಕೊಂಡಿದ್ದಲ್ಲಿ ಸ್ವಾಧೀನವನ್ನು ಹಿಂದಕ್ಕೆ ಪಡೆಯುವುದಕ್ಕೆ ಸಂಬಂಧಿಸಿದ ದಾವೆಯನ್ನು ಬೇಷರತ್ತಾಗಿ ದಾಖಲಿಸಬಹುದಾಗಿರುತ್ತದೆ.ದಸ್ತಾವೇಜಿನ ಅನೂರ್ಜಿತತೆಯ ಬಗೆಗೆ ಘೋಷಣೆಯನ್ನು ಕೋರುವ ಯಾವುದೇ ಅಗತ್ಯವಿರುವುದಿಲ್ಲ.

12. ಮಾನ್ಯ ನ್ಯಾಯವಾದಿಗಳು,ದಿನಾಂಕ: 28.03.2012 ರಂದು ವಿಲೆಯಾದಂಥ ಎಸ್.ಕೆ.ಎಸ್. ಸಿವ ಕುಮಾರ್ -ವಿರುದ್ಧ ಕಾರ್ಯನಿರ್ವಹಣಾಧಿಕಾರಿ, ಇನಾಮ್ ಕರೂರ್ ಮುನಿಸಿಪಾಲಿಟಿ ಹಾಗೂ ಇತರರು ಮೊಕದ್ದಮೆಯಲ್ಲಿ ರಿಟ್ ಅರ್ಜಿ ಸಂ. (ಎಂಡಿ) ಸಂ:10004/2005 ಹಾಗೂ ಸಂಬಂಧಿಸಿದ ವಿಷಯಗಳಲ್ಲಿ ಮದ್ರಾಸ್ ಉಚ್ಚ ನ್ಯಾಯಾಲಯದ ಮಧುರೈ ವಿಭಾಗೀಯ ಪೀಠದ ವರದಿಯಾಗದ ತೀರ್ಪುಗಳನ್ನು ಸಹ ಉದಾಹರಿಸಿರುತ್ತದೆ.

13. ಈ ನ್ಯಾಯಾಲಯವು ಇಬ್ಬರೂ ಪಕ್ಷಕಾರರ ವಾದವಿವಾದಗಳನ್ನು ಎಚ್ಚರದಿಂದ ಪರಿಗಣಿಸಿ, ಅವರು ಉದಾಹರಿಸಿದ ತೀರ್ಪುಗಳನ್ನು ಪರಿಶೀಲಿಸಿರುತ್ತದೆ.

14. ರೇವಜೀತು ಬಿಲ್ಡರ್ ಅಂಡ್ ಡೆವಲಪರ್ -ವಿರುದ್ಧ-ನಾರಾಯಣಸ್ವಾಮಿ ಮತ್ತು ಮಕ್ಕಳು ಹಾಗೂ ಇತರರು (2009) 10 ಎಸ್ಸಿಸಿ 84 10-ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯ, ತಿದ್ದುಪಡಿಗೆ ಸಂಬಂಧಿಸಿದ ಅರ್ಜಿಗಳನ್ನು ವ್ಯವಹರಿಸುವಾಗ ಪರಿಗಣನೆಗೆ ತೆಗೆದುಕೊಳ್ಳಬೇಕಾದ ಅಂಶಗಳ ಬಗ್ಗೆ ಈ ಮುಂದಿನಂತೆ ಅಭಿಪ್ರಾಯಪಟ್ಟಿದೆ:ಗ

i) ಕೋರಲಾದ ತಿದ್ದುಪಡಿಯು ಮೊಕದ್ದಮೆಯನ್ನು ಯುಕ್ತವಾಗಿ ಹಾಗೂ ಪರಿಣಾಮಕಾರಿಯಾಗಿ ನ್ಯಾಯನಿರ್ಣಯ ಮಾಡುವುದಕ್ಕೆ ಅನಿವಾರ್ಯವಾಗಿದೆಯೇ?

ii) ತಿದ್ದುಪಡಿಗೆ ಸಂಬಂಧಿಸಿದ ಅರ್ಜಿಯು ಸದ್ಭಾವನೆಯಿಂದ ಕೂಡಿದೆಯೇ ಅಥವಾ ದುರ್ಭಾವನೆಯಿಂದ ಕೂಡಿದೆಯೇ?

iii) ತಿದ್ದುಪಡಿಯು, ಹಣದ ರೂಪದಲ್ಲಿ ಸಮರ್ಪಕವಾಗಿ ಪರಿಹಾರ ಒದಗಿಸಲಾಗದಂಥಹ ಎದುರು ಪಕ್ಷಕಾರರಿಗೆ ಬಾಧಕವುಂಟು ಮಾಡುವುದಿಲ್ಲವೆ?

iv)ತಿದ್ದುಪಡಿಯನ್ನು ನಿರಾಕರಿಸುವುದರಿಂದ ಅದು ವಾಸ್ತವಿಕವಾಗಿ ಅನ್ಯಾಯಕ್ಕೆ ದಾರಿಮಾಡಿಕೊಡುವುದಿಲ್ಲವೇ ಅಥವಾ ಬಹುಬಗೆಯ ವ್ಯಾಜ್ಯಗಳಿಗೆ ಅವಕಾಶ ಮಾಡಿಕೊಡುವುದಿಲ್ಲವೆ?

v) ಪ್ರಸ್ತಾವಿತ ತಿದ್ದುಪಡಿಯು, ಮೊಕದ್ದಮೆಯ ಸ್ವರೂಪ ಹಾಗೂ ಸ್ವಭಾವವನ್ನು ಸಂವಿಧಾನಾತ್ಮಕವಾಗಿ ಅಥವಾ ಮೂಲಭೂತವಾಗಿ ಬದಲಾಯಿಸುವುದಿಲ್ಲವೆ?ಹಾಗೂ

vi) ಸಾಮಾನ್ಯ ನಿರ್ಣಯದಂತೆ, ತಿದ್ದುಪಡಿ ಮಾಡಿದ ಕ್ಲೇಮುಗಳ ಮೇಲಿನ ಹೊಸ ದಾವೆಯನ್ನು ಅರ್ಜಿ ಸಲ್ಲಿಸಿದ ದಿನಾಂಕದಂದು ಕಾಲಪರಿಮಿತಿಯ ಮೂಲಕ ಪ್ರತಿಬಂಧಿಸಿದರೆ, ನ್ಯಾಯಾಲಯವು ತಿದ್ದುಪಡಿಗಳನ್ನು ನಿರಾಕರಿಸುವುದಿಲ್ಲವೆ?

15. ಸನ್ಮಾನ್ಯ ನ್ಯಾಯಾಧೀಶರು, ಇವೆಲ್ಲವೂ ಕೇವಲ ದೃಷ್ಟಾಂತರೂಪದಲ್ಲಿವೆಯೇ ಹೊರತು ಸಮಗ್ರವಾಗಿಲ್ಲವೆಂದು ಸ್ಪಷ್ಟಪಡಿಸಿರುತ್ತಾರೆ.ಈ ಸಂಬಂಧದಲ್ಲಿ ಒಂದು ತೀರ್ಮಾನಕ್ಕೆ ಬರುವಾಗ, ಕ್ರಮಾದೇಶ 6, ನಿಯಮ 17 ರಡಿಯಲ್ಲಿ ಅರ್ಜಿಯನ್ನು ಗಂಭೀರ ನ್ಯಾಯಿಕ ಉಪಯೋಗಕ್ಕಾಗಿ ಅಕ್ಷೇಪಿಸಲಾಗಿದೆಯೇ ಹೊರತು ಅದನ್ನು ಎಂದೂ ಸಾಮಾನ್ಯ ರೀತಿಯಲ್ಲಿ ತೆಗೆದುಕೊಳ್ಳಬಾರದೆಂದು ತಿಳಿಸಿ ಎಚ್ಚರಿಕೆಯ ಪದವನ್ನು ಸಹ ನೀಡಲಾಗಿದೆ.

16. ಪ್ರಸ್ತುತ ಮೊಕದ್ದಮೆಯಲ್ಲಿ ತಿದ್ದುಪಡಿಯ ರೂಪದಲ್ಲಿ ಕೋರಿದ ಹೊಸ ಪರಿಹಾರವನ್ನು ಅರ್ಜಿ ಸಲ್ಲಿಸಿದ ದಿನಾಂಕದಂದು ಕಾಲಪರಿಮಿತಿಯ ಮೂಲಕ ನಿರ್ಬಂಧಿಸಲಾಗಿದೆಯೇ ಎಂಬುದು ಪರಿಗಣನೆಗೆ ಕೋರಿರುವ ಪ್ರಶ್ನೆಯಾಗಿದೆ.

17. ಪ್ರತಿವಾದಿಯು, ಅಧಿವಿಚಾರಣೆಯನ್ನು ಆರಂಭಿಸಲಾಗಿದೆ ಹಾಗೂ ಪರಿಹಾರವನ್ನು ಕಾಲಪರಿಮಿತಿಯ ಮೂಲಕ ನಿರ್ಬಂಧಿಸಲಾಗಿದೆಯೆಂಬ ಕಾರಣದ ಮೇಲೆ ತಿದ್ದುಪಡಿ ಅರ್ಜಿಗೆ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾನೆಂಬುದು ಅವನ ಪ್ರತಿ ಹೇಳಿಕೆಯಿಂದ ಕಂಡುಬರುತ್ತದೆ.ಕಾಲಪರಿಮಿತಿ ಅಧಿನಿಯಮ, 1963 ರಲ್ಲಿನ ಅನುಸೂಚಿಯ 59 ಅನುಚ್ಛೇದವು, ಒಂದು ಲಿಖಿತ ಪತ್ರವನ್ನು ರದ್ದುಪಡಿಸಲು ಅಥವಾ ತಳ್ಳಿಹಾಕಲು ಅಥವಾ ಕರಾರನ್ನು ವಜಾಮಾಡುವುದಕ್ಕೆ ಮೂರು ವರ್ಷಗಳ ಕಾಲಪರಿಮಿತಿಯನ್ನು ನಿಗದಿಪಡಿಸಿರುತ್ತದೆ.ಅಲ್ಲದೆ ಇದು, ಈ ಲಿಖಿತ ಪತ್ರಗಳು ಅಥವಾ ಡಿಕ್ರಿಯನ್ನು ರದ್ದುಗೊಳಿಸಲು ಅಥವಾ ವಜಾಗೊಳಿಸುವುದು ಅಥವಾ ಕರಾರನ್ನು ವಜಾಮಾಡುವುದಕ್ಕೆ ವಾದಿಗೆ ಅರ್ಹವಾದ ಸಂಗತಿಗಳು ಅವನಿಗೆ ಮೊದಲು ತಿಳಿದಾಗಿನಿಂದ ಈ ಅವಧಿಯು ಆರಂಭವಾಗುತ್ತದೆಂಬುದನ್ನು ಗೊತ್ತುಪಡಿಸುತ್ತದೆ.ಈ ಮೊದಲೇ ಹೇಳಿದಂತೆ,ದಿನಾಂಕ: 01.01.2003 ರ ವಿಮೋಚನಾ ಪತ್ರವನ್ನು ರಹಸ್ಯವಾಗಿ ಬರೆಯಿಸಿ ವಾದಿಯ ಹೆಸರಿನಲ್ಲಿ ಪ್ರತಿವಾದಿಯೇ ನೋಂದಾಯಿಸಿರುತ್ತಾನೆಂದು ಸ್ವತಃ ವಾದಿಯೇ ತನ್ನ ವಾದಪತ್ರದಲ್ಲಿ ಆಪಾದಿಸಿರುತ್ತಾನೆ.2003 ನೇ ವರ್ಷದಲ್ಲಿ ಸಲ್ಲಿಸಿದ ಲಿಖಿತ ಹೇಳಿಕೆಯಲ್ಲಿದಿನಾಂಕ: 01.01.2003 ರಂದು ವಿಮೋಚನಾ ಪತ್ರವನ್ನು ಬರೆಯಿಸುವ ಮೂಲಕ, ವಾದಿಯ ದಾವಾ ಅನುಸೂಚಿತ ಸ್ವತ್ತಿಗೆ ಸಂಬಂಧಿಸಿದಂತೆ ತನ್ನ ಹಕ್ಕುಗಳನ್ನು ಬಿಟ್ಟುಕೊಟ್ಟಿದ್ದಾನೆಂದು ಪ್ರತಿವಾದಿಯು ನಿರ್ದಿಷ್ಟವಾಗಿ ಹೇಳಿರುತ್ತಾನೆ.ವಾದಿಯು ವಾದಪತ್ರದಲ್ಲಿ ಸ್ವತಃ ಒಪ್ಪಿಕೊಂಡಿರುವಂತೆ ಹಾಗೂ ಲಿಖಿತ ಹೇಳಿಕೆಯಲ್ಲೂ ನಿರೂಪಿಸಿರುವಂತೆ ಅವನಿಗೆ 2003 ನೇ ವರ್ಷದಷ್ಟು ಹಿಂದೆಯೇ ವಿಮೋಚನಾ ಪತ್ರದ ಬಗೆಗೆ ತಿಳಿದಿತ್ತೆಂಬುದು ಸ್ಪಷ್ಟವಾಗುತ್ತದೆ.ವಾದಿಯು, 2003 ರಿಂದ ಮೂರು ವರ್ಷಗಳು ಮೀರಿ ಸದರಿ ಲಿಖಿತ ಪತ್ರವನ್ನು ರದ್ದುಪಡಿಸುವ ಪರಿಹಾರವನ್ನು ಕೋರಿರುವುದಕ್ಕೆ ಅವಕಾಶ ನೀಡಲಾಗಿಲ್ಲ.ಪಕ್ಷಕಾರರು, ಕಾಲಪರಿಮಿತಿಯ ಕಾನೂನಿನಡಿಯಲ್ಲಿ ಹಕ್ಕುಗಳನ್ನು ಅರ್ಜಿಸಿದಲ್ಲಿ ಹಾಗೂ ಅವುಗಳನ್ನು, ವಾದಗಳನ್ನು ತಿದ್ದುಪಡಿಮಾಡುವ ಮೂಲಕ ಹಿಂತೆಗೆದುಕೊಳ್ಳಲು ಕೋರಿದರೆ, ಅಂಥ ಸಂದರ್ಭಗಳಲ್ಲಿ ಅಂಥ ಅರ್ಜಿಯನ್ನು ನಿರಾಕರಿಸಬೇಕೆಂಬುದನ್ನು ಅರ್ಜಿದಾರ ಹಾಗೂ ಪ್ರತ್ಯರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ಉಲ್ಲೇಖಿಸಿದ ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳು ಚ ಸ್ಪಷ್ಟವಾಗಿ ನಿರೂಪಿಸಿರುತ್ತವೆ.

18. ಮಾನ್ಯ ಅಧಿವಿಚಾರಣಾ ನ್ಯಾಯಾಧೀಶರು ಈ ಅಂಶಗಳ ಕಡೆ ಗಮನಕೊಡದೆ ಗೊಂದಲಮಯವಾದ ಆದೇಶವನ್ನು ಹೊರಡಿಸಿರುತ್ತಾರೆ.ಯುಕ್ತ ಪರಿಶ್ರಮದ ಹೊರತಾಗಿಯೂ ವಾದಿಯು ಅಧಿವಿಚಾರಣೆ ಆರಂಭವಾಗುವ ಮೊದಲು ವಾದಪತ್ರದಲ್ಲಿ ಈ ವಿಷಯಗಳನ್ನು ಪ್ರಸ್ತಾಪಿಸಿರಲಿಲ್ಲವೆಂಬ ಬಗ್ಗೆ ಅಧಿವಿಚಾರಣಾ

ನ್ಯಾಯಾಧೀಶರು ೧ ಅಧಿವಿಚಾರಣೆಯ ಆರಂಭವಾದ ತರುವಾಯ ತುಂಬಾ ವಿಳಂಬಿಕೆ ಹಂತದಲ್ಲಿ ತಿದ್ದುಪಡಿ ಅರ್ಜಿಯನ್ನು ಅಂಗೀಕರಿಸಿರುವುದಕ್ಕೆ ಸಂಬಂಧಿಸಿದಂತೆ ತನ್ನ ಸಮ್ಮತಿಯನ್ನು ಸಹ ದಾಖಲಿಸಿರುವುದಿಲ್ಲ.ಅಜೇಂದ್ರಪ್ರಸಾದ್ (ಮೇಲೆ ಹೇಳದ) ಮೊಕದ್ದಮೆಯಲ್ಲಿ, ಘನತೆವೆತ್ತ ನ್ಯಾಯಾಧೀಶರು ಅಧಿವಿಚಾರಣೆಯನ್ನು, ವಿವಾದಾಂಶಗಳು ಇತ್ಯರ್ಥಗೊಂಡು ಮೊಕದ್ದಮೆಯನ್ನು ಸಾಕ್ಷ್ಯದ ದಾಖಲೆಗಾಗಿ ಮಂಡಿಸುವಾಗ ಅಧಿವಿಚಾರಣೆಯನ್ನು ಆರಂಭಿಸಲಾಗಿದೆಯೆಂದು ಭಾವಿಸಲಾಗಿದೆಯೆಂಬುದಾಗಿ ಅಭಿಪ್ರಾಯಪಟ್ಟಿರುತ್ತಾರೆ.2011 ರಲ್ಲಿ ಅಧಿವಿಚಾರಣೆಯನ್ನು ಆರಂಭಿಸಿರುವುದರಿಂದ, ಅಧಿವಿಚಾರಣಾ ನ್ಯಾಯಾಧೀಶರು ಅರ್ಜಿಯನ್ನು ಅಂಗೀಕರಿಸುವ ಮುನ್ನ ತಮ್ಮ ಸಮ್ಮತಿಯನ್ನು ದಾಖಲಿಸಿರುತ್ತಾರೆ.

19. ಮೇಲೆ ಹೇಳಿದ ಹೇಳಿದ ಕಾರಣಗಳಿಗಾಗಿ, ಪ್ರಶ್ನಿತ ಆದೇಶವನ್ನು ಎತ್ತಿಹಿಡಿಯಲಾಗುವುದಿಲ್ಲ ಎಂಬುದು ನ್ಯಾಯಾಲಯದ ಪರಿಗಣಿ ತ ಅಭಿಪ್ರಾಯವಾಗಿರುತ್ತದೆ.

ಪರಿಣಾಮವಾಗಿ, ರಿಟ್ ಅರ್ಜಿಯನ್ನು ಪುರಸ್ಕರಿಸಿ, ಪ್ರಶ್ನಿತ ಆದೇಶವನ್ನು ರದ್ದುಪಡಿಸಲಾಗಿದೆ.ಮಂಗಳೂರಿನಲ್ಲಿನ II ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರ ಕಡತದ ಮೇಲಿನ ಒ.ಎಸ್.ಸಂ .244/2003 ರಲ್ಲಿನ ತಿದ್ದುಪಡಿ ಅರ್ಜಿ III ನ್ನು ವಜಾಗೊಳಿಸಲಾಗಿದೆ.

ಪಕ್ಷಕಾರರು ತಮ್ಮ ವೆಚ್ಚಗಳನ್ನು ತಾವೇ ಭರಿಸಬೇಕಾಗಿರುತ್ತದೆ.